25 ರೂ ದಿನದ ಬಸ್ ಪಾಸ್ ಸಂಖ್ಯೆ ಎಷ್ಟು,

ಆ) ಇದರಿಂದ ಪ್ರತಿದಿನ ಬರತಕ್ಕ ಅಂದಾಜು ವರಮಾನವೆಷ್ಟು,

ಇ) ಈ ದಿನದ ಪಾಸ್‌ಗಳನ್ನು ಮರುವಿತರಣೆ ಹಾಗೂ ಒಬ್ಬರಿಂದ ಮತ್ತೊಬ್ಬರಿಗೆ ನೀಡಿ ಸಾರಿಗೆ ಸಂಸ್ಥೆಗೆ ವಂಚನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) 1 91 ಲಕ್ಷ ಪಾಸುಗಳು

ಆ) ಪ್ರತಿ ದಿನ ಅಂದಾಜು ರೂ 47 75 ಲಕ್ಷಗಳು

ಇ) ಹೌದು

ಈ) ಪಾಸುಗಳ ದುರುಪಯೋಗದ ಬಗ್ಗೆ ದೂರುಗಳು ಬಂದ ಕೂಡಲೇ ಇದನ್ನು ತಡೆಯಲು ಈ ಕೆಳಕಾಣಿಸಿರುವ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ

1) ಪ್ರಯಾಣಿಕರು ಪಾಸುಗಳನ್ನು ಖರೀದಿಸಿದ ಕೂಡಲೇ ಅದರಲ್ಲಿ ಕಡ್ಡಾಯವಾಗಿ ಸಹಿ ಮಾಡಿ ಅವರ ವಯಸ್ಸನ್ನು ನಮೂದಿಸಬೇಕು

2) ಪ್ರಯಾಣಿಕರು ಅವರ ಲಿಂಗವನ್ನು ಗುರುತು ಹಾಕಬೇಕು

3) ಈ ದುರುಪಯೋಗವನ್ನು ಪತ್ತೆಹಚ್ಚಲು ಬಿ ಎಂ ಟಿ ಸಿ ಯಿಂದ ಖಾಯಂ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ

1538 (1810) ಶ್ರೀ ವಿ ಸೋಮಣ್ಣ (ಬಿನ್ನಿಪೇಟೆ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ ಎಂ ಆರ್ ಡಿ ಎ ಬೃಹತ್ ಬೆಂಗಳೂರು ಮಹಾನಗರಕ್ಕೆ ಸಂಬಂಧಪಟ್ಟಂತೆ ಕರಡು ಮಾಸ್ಟರ್ ಪ್ಲಾನ್ ಇಲ್ಲಿಯವರೆಗೆ ಪ್ರಕಟಿಸದೇ ಇರಲು ಕಾರಣಗಳೇನು,

ಆ) ಇದರಿಂದ ನಿರ್ಮಾಣ ಕಾರ್ಯ ಸ್ಥಗಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಕರಡು ಮಾಸ್ಟರ್ ಪ್ಲಾನ್ ಪ್ರಕಟಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಮಹಾನಗರ ಪ್ರದೇಶದಲ್ಲಿರುವ ಆನೇಕಲ್, ಹೊಸಕೋಟೆ, ನೆಲಮಂಗಲ, ಮಾಗಡಿ ಹಾಗೂ ಕನಕಪುರದ ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಹಾಗೂ ರಾಮನಗರ, ಚನ್ನಪಟ್ಟಣ ತಾಲ್ಲೂಕುಗಳಲ್ಲಿರುವ ಏರಿಯಾ ಪ್ಲಾನಿಂಗ್ ಜೋನ್ (APZ-I) ಮಧ್ಯಂತರ ಮಹಾ ಯೋಜನಾ ಮತ್ತು ಮಾಸ್ಟರ್ ಪ್ಲಾನ್ ಯೋಜನೆಯನ್ನು ರೂಪಿಸಿದ್ದು, ಅವುಗಳಿಗೆ ಮಂಜೂರಾತಿ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಸದ್ಯ BIAAPA, BDA, & BMICAPA ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಗಾಗಿ ಕರಡು/ ಅಂತಿಮ ಮಹಾ ಯೋಜನೆ ಪ್ರಕಟಿಸಲಾಗಿರುವುದರಿಂದ, ಈ ಕ್ಷೇತ್ರಗಳಲ್ಲಿ ಲೇಔಟ್ ಮಂಜೂರಾತಿ ನಡೆದಿದೆ ಆದರೆ ಆನೇಕಲ್, ಹೊಸಕೋಟೆ, ಕನಕಪುರ ನೆಲಮಂಗಲ, ಮಾಗಡಿ, ಯೋಜನಾ ಪ್ರದೇಶಗಳಲ್ಲಿ ಹಾಗೂ (APZ-I) ಗಾಗಿ ಮಧ್ಯಂತರ ಮಹಾಯೋಜನಾ ಜಾರಿಗೆ ಬಂದ ನಂತರ ಲೇಔಟ್ ಮಂಜೂರಾತಿ ಮಾಡಲಾಗುವುದು

ಇ) ಕರಡು ಮಧ್ಯಂತರ ಮಹಾ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ

1539 (1811) ಶ್ರೀ ವಿ ಸೋಮಣ್ಣ (ಬಿನ್ನಿಪೇಟೆ) – ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯಾಪ್ತಿಯಲ್ಲಿರುವ ಸುಮಾರು 408 ಎಕರೆ ಸರ್ಕಾರದ ಭೂಮಿಯನ್ನು ಹರಾಜು ಮಾಡಲು ನಿರ್ಧರಿಸಲು ಕಾರಣಗಳೇನು,

ಆ) ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ವಿಸ್ತರಣೆಗೆ ಹಾಗೂ ಏರೋಸ್ಪೇಸ್, ಜೆಮ್ಸ್ ಮತ್ತು ಜ್ಯುಯಲರಿ ಪಾರ್ಕ್ ಇತ್ಯಾದಿ ಪ್ರಾರಂಭಿಸಲು ಈ ಪ್ರದೇಶದಲ್ಲಿ ಭೂಮಿಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,